# ಕಸ್ತೂರ್‌ಬಾ v/s ಗಾಂಧಿ

ಬರಗೂರು ರಾಮಚಂದ್ರಪ್ಪ
ಕಲೆ: ಮನೋಹರ ಕೆ. ಆಚಾರ್ಯ



**There was some turmoil between them. But there was tremendous love and unshakable trust between them. Without Ba, Mohandas could not become Mahathma Gandhi.**

**–Tushar Gandhi**
**(Great grandson of Gandhi)**

**Her Silence in the face of Gandhi's magnanimity is often read as submission or obsolute devotion to her husband. But Kasturaba, as she was known before her marriage was by not a passive follower of her husband's will.**

**–Arun Gandhi**
**(Grandson of Gandhi)**

## ಮರಳಿ ಮಣ್ಣಿಗೆ, ಮರಳಿ ಬಾಲ್ಯಕ್ಕೆ

ಚಿತೆ ಉರಿಯುತ್ತಿತ್ತು!
ಚಿತ್ತವೇ ಚಿತೆಯಾದಂತೆ;
ಬದುಕು ಬೆಂಕಿಯಾದಂತೆ;
ಅನುಭವಗಳೆಲ್ಲ ಸುಟ್ಟು ಚಟ್ಟವಾದಂತೆ;w
ಉರಿದುರಿದು ಬೂದಿಯಾದಂತೆ;
ಬೂದಿಯಲ್ಲಿ ನೆನಪು ಪುಡಿಯಾದಂತೆ;
ಪುಡಿಯೆಲ್ಲ ಇಡಿಯಾಗಿ ಕಾಡಿಸಿದಂತೆ!
ಕಾಡಲ್ಲಿ ಅಗೋಚರ ಅಲೆದಂತೆ!

ಎಂಥ ವಿಸ್ಮಯ! ಕಟ್ಟಿದ ಬದುಕು ಚಟ್ಟವೇರಿ, ಬೆಂಕಿಯಲ್ಲಿ ಬೂದಿಯಾಗಿ, ಉರಿಯ ಉಯ್ಯಾಲೆಯಲ್ಲಿ ಆಕಾರ ನಿರಾಕಾರದತ್ತ ಸಾಗಿದ ಸಾವಿನ ಸಂಕಟ! ಗಾಂಧಿ ನೋಡುತ್ತ ನಿಂತಿದ್ದರು. ಬಾಲ್ಯದಿಂದಲೂ ಒಟ್ಟಿಗೆ ಬೆಳೆಯುತ್ತ, ಸಂಸಾರಿಗಳಾಗುತ್ತ, ಸಂಚಾರಿಗಳಾಗುತ್ತ, ಸಮಸ್ಯೆ, ಸವಾಲು, ಸಂಘರ್ಷಗಳ ಸುಳಿಯಲ್ಲಿ ಸಿಲುಕಿಯೂ ಸೋಲದ ದೋಣಿ ಪಯಣದ ಸಂಗಾತಿ ಕಸ್ತೂರ್ ಬಾ ಇನ್ನಿಲ್ಲ!

ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ. ಗಾಂಧಿಯವರ ಜೊತೆಗಿದ್ದ ಜನ ಹೊರಟು ನಿಂತರು. 'ಬನ್ನಿ ಬಾಪು' ಎಂದರು. ಬಾಪು ಹೊರಡಲಿಲ್ಲ. ಒತ್ತಾಯಿಸಿದರು:

'ಎಲ್ಲ ಮುಗಿಯಿತಲ್ಲ ಬಾಪು, ಬನ್ನಿ'

'ಮುಗಿದಿಲ್ಲ. ಆರಂಭವಾಗಿದೆ' – ಎಂದರು ಗಾಂಧಿ!

ಕೇಳಿದವರಿಗೆ ಅಚ್ಚರಿ!

ಗಾಂಧಿಯೇ ಹೀಗೆ! ಇತರರು ಆರಂಭ ಎಂದದ್ದನ್ನು ಅಂತ್ಯ ಎನ್ನುವ, ಅಂತ್ಯ ಎಂದದ್ದನ್ನು ಆರಂಭ ಎನ್ನುವ ವಿಶಿಷ್ಟ ವ್ಯಕ್ತಿತ್ವ. ಸಲ್ಲದ ವಿಷಯಗಳ ಆರಂಭಕ್ಕೆ ಉತ್ತಮ ವಿಷಯಗಳ ಅಂತ್ಯಕ್ಕೆ ಅವಕಾಶ ಕೊಡದ ಸಂಕಲ್ಪಿಗ! ಕರೆದವರಿಗೆ 'ನೀವು ಹೋಗಿ' ಎಂದರು. ಅವರ್‍ಯಾರೂ ಹೆಚ್ಚುಕಾಲ ಅಲ್ಲಿ ಇರುವಂತಿರಲಿಲ್ಲ; ಯಾಕೆಂದರೆ ಅದು ಪುಣೆಯ ಆಗಾಖಾನ್ ಅರಮನೆ! ಬಂಗಲೆಯನ್ನೇ ಅರಮನೆಯೆಂದು ಕರೆಯಲಾಗುತ್ತಿತ್ತು. ಈಗ ಅರಮನೆಯೇ ಜೈಲಾಗಿತ್ತು. ಹೌದು. ಹಿಂದೆ